ಕೆಟ್ಟ ಕೆಲಸ!' ಬೋರ, ಗಂಗಮ್ಮ, ಇವರೊಡನೆ ಹುಡುಗ, ಹೀಗೆ ಮೂವರೂ ಗಟ್ಟಿಯಾಗಿ ನಕ್ಕರು! ಮುದುಕ ತನ್ನ ಹೆಂಡತಿಯ ಮುಖ ನೋಡಿ ಸಿಟ್ಟಿನಿಂದ ಮಕ್ಕಳನ್ನು ಶಪಿಸುತ್ತಾ, ತನ್ನ ಹೊಟ್ಟೆ ತುಂಬಿಸಿಕೊಂಡನು!' (ಪುಟ 8)

ಈ ಕಥೆಯು ಖಚಿತವಾಗಿ ವರ್ಗ ತಾರತಮ್ಯ, ದುಡಿಯುವ ವರ್ಗದ ಶೋಷಣೆ ಮತ್ತು ಶೋಷಿತರು ಭಾವುಕ ವಿಧಿವಾದಕ್ಕೆ ಅಂಟಿಕೊಳ್ಳದೆ ತಮ್ಮ ಹಕ್ಕುಗಳನ್ನು ಕಿತ್ತುಕೊಳ್ಳುವ ಪರಿಸ್ಥಿತಿಯನ್ನು ವಿವರಿಸುವ ವಾಸ್ತವವಾದಿ ವಸ್ತುವನ್ನು ಹೊಂದಿದೆ. ಅಷ್ಟೇ ಅಲ್ಲ, ಓದುತ್ತಾ ಹೋದಂತೆ ಇದು ಸಾಕಷ್ಟು ಕಲಾತ್ಮಕವಾಗಿಯೂ ಇರುವ ಕಥೆ ಎಂಬುದು ಅರಿವಾಗುತ್ತದೆ. ಯಾಕೆಂದರೆ ಕಥೆಯ ಕೊನೆಯಲ್ಲಿ ಕಥೆಯ ಎಲ್ಲ ಪಾತ್ರಗಳೂ ಜೀವ ತುಂಬಿಕೊಳ್ಳುತ್ತಾರೆ. ಕೊನೆಯ ದೃಶ್ಯವು ದೇವನೂರ ಮಹಾದೇವ ಅವರ 'ಒಡಲಾಳ' ಕೃತಿಯಲ್ಲಿ ಹಸಿದ ಕುಟುಂಬವು ಕಡಲೆ ಕಾಯಿಯನ್ನು ತಿನ್ನುವ ದೃಶ್ಯವನ್ನು ನೆನಪಿಸುತ್ತದೆ.

ಈ ಕಥೆಯಲ್ಲಿ ಕ್ರಿಯಾಶೀಲರಾದ ಮತ್ತು ಖಚಿತವಾದ ತಾತ್ವಿಕ ನಿಲುವನ್ನು ಹೊಂದಿರುವ ಬೋರ ಮತ್ತು ಗಂಗಮ್ಮ ಇಬ್ಬರಿಗೆ ಮಾತ್ರ ಹೆಸರಿದೆ. ಉಳಿದ ಮುನ್ನೆಲೆ-ಹಿನ್ನೆಲೆಯ ಪಾತ್ರಗಳಾದ ಮುದುಕ, ಆತನ ಪತ್ನಿ ಮತ್ತು ಮಗು, ಕಮ್ಮಾರ ಮತ್ತು ಮಾಲೀಕ ಇವರಿಗೆಲ್ಲ ಹೆಸರೇ ಇಲ್ಲ. ಆದರೆ ಅವರೆಲ್ಲರೂ ಪ್ರತಿನಿಧಿ ಪಾತ್ರಗಳಾಗಿ ಮಾತ್ರ ಪ್ರಸ್ತುತರಾಗುತ್ತಾರೆ. ಕಥೆಯನ್ನು ಮುಂದಕ್ಕೊಯ್ಯುತ್ತಾರೆ.

ಕವಿಯಾದ ಕಯ್ಯಾರ ಕಿಂಞಣ್ಣ ರೈ ಅವರು ಕಥೆಗಳಲ್ಲಿ ವಿವಿಧ ಸಂಕೇತಗಳನ್ನು ನಿಯೋಜಿಸುತ್ತಾರೆ. ಹಾಗೆ ನೋಡಿದರೆ ಅದು ಅವರ ಕಥೆಗಳ ವೈಶಿಷ್ಟ್ಯವಾಗಿದೆ. ಅವರ ಈ ತಂತ್ರಗಾರಿಕೆಯನ್ನು, ಈ ಕಥೆಯಲ್ಲಿ ಯೂ ಕಾಣಬಹುದು, ಜೊತೆಗೆ ಅದರ ಉದಾಹರಣೆಗಳನ್ನು ಮೇಲೆ ಹೇಳಿರುವ ಅಂಶಗಳಲ್ಲಿಯೂ ಕಾಣಬಹುದು.

'ಯಾರು ತಿಳಿಸಿದರು?' ಮತ್ತು 'ಕಳವಳದಲ್ಲಿ ಚಳವಳ' ಕಥೆಗಳಲ್ಲಿ ಪ್ರಗತಿಶೀಲ ಕಥೆಗಳ ಆಶಯಗಳಾದ ಕಾರ್ಮಿಕ ಸಂಘಟನೆಯ ಪೂರ್ವರಂಗದ ಕಥೆಗಳಿವೆ. ಕಾರ್ಮಿಕ ಸಂಘಟನೆ ಮತ್ತು ಹೋರಾಟವು ಚಾರಿತ್ರಿಕ ಅನಿವಾರ್ಯತೆ ಎಂಬ ಚಿಂತನೆಯನ್ನು ಉದಾಹರಣೆಯಾಗಿಸುವ ಕಥೆಗಳಿವು.

'ಯಾರು ತಿಳಿಸಿದರು?' ಕಥೆಯ ನಾಯಕಿಗೂ ಗಂಗಮ್ಮ ಎಂಬ ಹೆಸರು. ಅವಳ ಗಂಡನನ್ನು ಕ್ಷುಲ್ಲಕ ಕಾರಣಗಳಿಗಾಗಿ ಸರಕಾರ ಬಂಧಿಸಿ ಜೈಲಲ್ಲಿಟ್ಟಿದೆ. ಈಕೆಯೂ ಕಡ್ಡಾಯ ಕಾರ್ಮಿಕಳಾಗಿ ದುಡಿದು ಮನೆಗೆ ಹೋಗುವಾಗ ಮಗಳಿಗಾಗಿ ತಿಂಡಿ ತರುತ್ತೇನೆಂದು ವಾಗ್ದಾನ ಇತ್ತಿದ್ದಳು. ಅದಕ್ಕಾಗಿ ತಂದಿದ್ದ ಒಂದಾಣೆಯನ್ನು ಕಳೆದುಕೊಂಡಿದ್ದಳು. ಆದರೆ ಯಾರೋ ಮಿಕ್ಕಿದ್ದ ಸ್ವಲ್ಪ ತಿಂಡಿಗಳನ್ನು ಅವಳಿಗೆ ಕೊಟ್ಟದ್ದರಿಂದ ಅದನ್ನೇ ಸೆರಗಿನಲ್ಲಿ ಕಟ್ಟಿ ಕೊಂಡು ಮನೆಯತ್ತ ಧಾವಿಸುತ್ತಾಳೆ. ದಾರಿಯಲ್ಲಿ ಬೀರಣ್ಣ ಎಂಬ ಕಾರ್ಮಿಕ ಮುಂದಾಳು ಅವಳಿಗೆ ಸಂಘಟನೆಯ ಸಭೆಗೆ ಬರಬೇಕೆಂದು ಕರೆಯುತ್ತಾನೆ. ಆದರೆ, ಅವಳು ಅದಕ್ಕೊಪ್ಪದೆ ಮಗುವಿಗೆ ತಿಂಡಿ ಕೊಡುವುದಕ್ಕಾಗಿ ಮನೆಯತ್ತ ಧಾವಿಸುತ್ತಾಳೆ. ಗೇಟಿನಲ್ಲಿರುವ ಪಠಾಣ ಅವಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಅವಳು ಸೆರಗಿನಲ್ಲಿ ಕಟ್ಟಿಕೊಂಡಿದ್ದ ತಿಂಡಿಯ ಗಂಟನ್ನು ದೂರಕ್ಕೆ ಎಸೆಯುತ್ತಾನೆ.

'ಗಂಗಮ್ಮನ ತಲೆ ಸುತ್ತ ಸುತ್ತುತ್ತಿರುವ ಶಾಸನವು ಪ್ರಾಣಿ ಜಾತಿಗಿರುವ ಸ್ವಾತಂತ್ರ್ಯವನ್ನು ಅವಳಿಂದ ಕಸಿದುಕೊಂಡಿದೆ'. (ಪುಟ 89). ಗಂಗಮ್ಮ ಕೂಲಿಗಾರರ ಚಳವಳಿಯಲ್ಲಿ ಮುಂದಾಳು ಆಗುತ್ತಾಳೆ. ಚಳವಳಿಗೆ ಸೇರಬೇಕೆಂದು ಅವಳಿಗೆ ಯಾರು ಹೇಳಿದರು? ಬೀರಣ್ಣನ ಈ ಪ್ರಶ್ನೆಗೆ, 'ನನಗೆ ಬೇರಾರೂ ತಿಳಿಸಲಿಲ್ಲ. ನಿರ್ದಯ ಹೃದಯದ ಅಧಿಕಾರಿಗಳೇ ಅವರ ಕೆಲಸದಿಂದ ನನಗೆ ಈ ಪಾಠ ಕಲಿಸಿದರು...' ಎಂದು ಗಂಗಮ್ಮ ಉತ್ತರಿಸುತ್ತಾಳೆ. ಆಡಳಿತ ಯಂತ್ರವೂ ಬಡಜನರನ್ನು ಶೋಷಿಸುತ್ತದೆಂಬ ಚಿಂತನೆಯನ್ನು ಮತ್ತು ಸಂಘಟನೆಯ ಅಗತ್ಯವನ್ನು ಕಯ್ಯಾರರು ಈ ಕಥೆಯಲ್ಲಿ ಹೇಳಿದ್ದಾರೆ.

'ಕಳವಳದಲ್ಲಿ ಚಳವಳ' ಕಥೆಯು ಬೋರ (ಮೊದಲನೆಯ ಕಥೆಯ ಪಾತ್ರವೊಂದರ ಹೆಸರು)